ಸೈಸೆಕ್ | ಕೆ-ಟೆಕ್ ಉನ್ನತಜ್ಞಾನ ಕೇಂದ್ರ
ಸೈಬರ್ ಸೆಕ್ಯುರಿಟಿ ಕರ್ನಾಟಕ

CySecK | K-Tech CoE for Cyber Security
Cyber Security Karnataka

# ಸೈಬರ್ ವಾರ್ತಿಕ
## ಮೇ 2022

# CYBER VARTIKA
## MAY 2022

ವಾರ್ಷಿಕೋತ್ಸವದ ಆವೃತ್ತಿ

ANNIVERSARY EDITION

## ಈ ಸಂಚಿಕೆಯಲ್ಲಿ

- -ಮುನ್ನುಡಿ
- -ಸಂಗ್ರಹಿಸಿದ ಸುದ್ದಿ
- -ಇನ್ಫೋಗ್ರಾಫಿಕ್ಸ್ ಮತ್ತು ಪೋಸ್ಟರ್‌ಗಳು
- -ಸ್ಪರ್ಧೆಯ ವಿವರಗಳು

## IN THIS ISSUE

- -Foreword
- -Curated News
- -Infographics and Posters
- -Contest details

ಸೈಬರ್ ವರ್ತಿಕಾನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ದಿಪತ್ರಿಕೆಯ ಮುಕ್ತ ಚಂದಾದಾರರಾಗಿ!
https://zcmp.in/BH6y

If Cyber Vartika was forwarded to you by a friend, get it directly every month by SUBSCRIBING HERE!
https://zcmp.in/BH6y

CySeck CoE @CySecKCoE CySecKCoE CySecK CySecK CySecK



# FOREWORD

ಸಚಿವರು - ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ; ಉನ್ನತ ಶಿಕ್ಷಣ; ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ, ಕರ್ನಾಟಕ ಸರ್ಕಾರ

Minister for Information Technology, Biotechnology, Science and Technology; Higher Education; Skill Development, Entrepreneurship & Livelihood – Government of Karnataka

ಸೈಬರ್ ವಾರ್ತಿಕ ಸುದ್ದಿಪತ್ರದ ಮೊದಲನೇ ವಾರ್ಷಿಕೋತ್ಸವದ ಆವೃತ್ತಿ ನಿಮ್ಮ ಮುಂದಿದೆ. ರಾಜ್ಯದಲ್ಲಿ ನಡೆಯುತ್ತಿರುವ ವಿವಿಧ ಸೈಬರ್ ಅಪರಾಧಗಳನ್ನು ತಡೆಗಟ್ಟಲು ಕರ್ನಾಟಕ ಸರ್ಕಾರ ಅನುಸರಿಸುತ್ತಿರುವ ಮಾರ್ಗೋಪಾಯಗಳನ್ನು ಮತ್ತು ಸೈಬರ್ ಭದ್ರತೆಯ ಜಾಗೃತಿಯನ್ನು ಮೂಡಿಸುವೆಡೆಗೆ ಇಟ್ಟಿರುವ ಹೆಜ್ಜೆಗಳನ್ನು ಈ ಸುದ್ದಿಪತ್ರದಲ್ಲಿ ಹೊರತರಲಾಗಿದೆ. ಜಾಗತಿಕವಾಗಿ ಕೋವಿಡ್-*19* ಸಾಂಕ್ರಮಿಕ ಕಾಣಿಸಿಕೊಂಡ ನಂತರ, ಸೈಬರ್ ಅಪರಾಧಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಆಗಿರುವುದಂತು ಸ್ಪಷ್ಟವಾಗಿ ಕಾಣಿಸುತ್ತಿದೆ. ಈ ರೀತಿಯ ಸೈಬರ್ ಅಪರಾಧಗಳನ್ನು ಎಸಗುತ್ತಿರುವವರನ್ನು ಸದೆಬಡಿಯುವುದು ಪ್ರಸ್ತುತ ಕಾಲಘಟ್ಟದ ಆದ್ಯತೆಯಾಗಿದೆ. ಸೈಬರ್ ಜಗತ್ತಿನಿಂದ ವಂಚಕರನ್ನು ಹೊರಗೆ ಹಾಕಲು, ಉದ್ಯಮ, ಶಿಕ್ಷಣ ಮತ್ತು ಸಮುದಾಯ ಆಧರಿತ ಸಂಸ್ಥೆಗಳು ಒಗ್ಗಟ್ಟಾಗಿ ಜವಾಬ್ದಾರಿ ಹೊತ್ತುಕೊಳ್ಳಬೇಕು ಹಾಗೂ ತಾಂತ್ರಿಕ ಮತ್ತು ತಾಂತ್ರಿಕೇತರ ಕೌಶಲ್ಯಗಳನ್ನು ಸುಧಾರಿಸಿಕೊಳ್ಳುವ ಮೂಲಕ ಈ ಕಾರ್ಯವನ್ನು ಸಾಧಿಸಬೇಕು.

ನಮ್ಮೆಲ್ಲರ ಜೀವನವನ್ನು ಇಂಟರ್‌ನೆಟ್ ಸುಲಭವಾಗಿಸಿದ್ದರು ಕೂಡ, ಅದು ಹಲವಾರು ನಕಾರಾತ್ಮಕ ವಿಷಯಗಳನ್ನು ಹೊತ್ತು ತಂದಿದೆ. ಅನೈತಿಕ ಹ್ಯಾಕರ್‌ಗಳು ಈ ಲೋಪಗಳನ್ನು ತಮ್ಮ ಲಾಭಕ್ಕೆ ಬಳಸಿಕೊಂಡಿದ್ದಾರೆ. ಈ ರೀತಿಯ ಮೋಸಗಾರರಿಂದ ತಪ್ಪಿಸಿಕೊಳ್ಳುವುದು ಬಹಳ ಮುಖ್ಯವಾಗಿದೆ.

ತಾಂತ್ರಿಕ ಮತ್ತು ಶೈಕ್ಷಣಿಕ ಕೌಶಲ್ಯಗಳನ್ನು ವಿಭಿನ್ನವಾಗಿ ಬಳಸಿಕೊಂಡು, ಸೈಬರ್ ಅಪರಾಧಗಳಿಂದ ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಸಾರ್ವಜನಿಕರಿಗೆ ಸ್ಪಷ್ಟವಾಗಿ ತಿಳಿಸಿ, ಅವರು ಈ ರೀತಿಯ ವಂಚನೆಗಳಿಗೆ ಎಡೆ ಮಾಡಿಕೊಡದಂತೆ ನೋಡಿಕೊಳ್ಳಬೇಕು. ಆ ಮೂಲಕ ಅವರನ್ನು ಆರ್ಥಿಕವಾಗಿ ಸುಭದ್ರಗೊಳಿಸಿ, ಸೈಬರ್ ಅಪರಾಧಿಗಳ ಕಪಿಮುಷ್ಟಿಯಿಂದ ದೂರ ಇಡಬೇಕು. ಈ ದಿನಗಳಲ್ಲಿ, ಡಿಜಿಟಲ್ ವಹಿವಾಟುಗಳು ಹೆಚ್ಚಾಗುತ್ತಿರುವುದರಿಂದ, ಮಾಹಿತಿ ಕಳ್ಳತನವನ್ನು ಮತ್ತು ಆರ್ಥಿಕ ನಷ್ಟಗಳನ್ನು ತಪ್ಪಿಸಲು, ಮುಂಜಾಗ್ರತೆ ಮತ್ತು ತಿಳುವಳಿಕೆ ಹೊಂದಿರುವುದು ಬಹಳ ಮುಖ್ಯವಾಗುತ್ತದೆ. ಸೈಬರ್ ಅಪರಾಧಿಗಳನ್ನು ಕಟ್ಟಿಹಾಕಲು ವಿವಿಧ ಕೋನಗಳಿಂದ ವಿಷಯವನ್ನು ಅರ್ಥೈಸಿಕೊಳ್ಳುವುದು ಈ ಕಾಲಘಟ್ಟದ ಅವಶ್ಯಕತೆ. ನಿಮ್ಮ ವೈಯಕ್ತಿಕ ಮಾಹಿತಿ ನಿಮ್ಮನ್ನು ಅನಾವರಣಗೊಳಿಸುವುದರಿಂದ, ಅದನ್ನು ಸುಭದ್ರವಾಗಿಸುವುದು, ಸೈಬರ್ ಜಗತ್ತಿನಲ್ಲಿ ಅದು ಕಳುವಾಗದಂತೆ ಆಗಬಹುದಾದ ಅಪಾಯಗಳನ್ನು ಮುಂಚಿತವಾಗಿ ತಿಳಿದುಕೊಂಡು, ಸರಿಯಾದ ಮುಂಜಾಗ್ರತೆ ವಹಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಎಲ್ಲರು ಜಾಗರೂಕರಾಗಿ, ಈ ರೀತಿಯ ಅಪರಾಧಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳುವ ಜೊತೆಗೆ, ನಿಮ್ಮ ನೆರೆಹೊರೆ ಹಾಗೂ ಆಪ್ತರನ್ನು ಕೂಡ ಸೈಬರ್ ವಂಚಕರ ಕೆಟ್ಟನೋಟದಿಂದ ಸುರಕ್ಷಿತವಾಗಿಡಿ.

ನಮ್ಮ ಜನರ ಅರಿವನ್ನು ವೃದ್ಧಿಸಿ, ನಡೆಯುತ್ತಿರುವ ವಿವಿಧ ಸೈಬರ್ ಅಪರಾಧ ಅಥವಾ ವಂಚನೆಗಳ ಬಗ್ಗೆ ಅವರ ಗಮನವನ್ನು ಸೆಳೆಯುವ ಗುರಿಯನ್ನು "ಸೈಬರ್ ವಾರ್ತಿಕ" ಸುದ್ದಿಪತ್ರ ಹೊಂದಿದೆ. ನಾವೆಲ್ಲರು, ಸೈಬರ್ ವಂಚನೆಗಳಿಗೆ ಕೊನೆಹಾಡಿ ನಮ್ಮ ಜನರನ್ನು ಸೈಬರ್ ವಂಚಕರಿಂದ ಸುರಕ್ಷಿತವಾಗಿಸುವ ಪ್ರತಿಜ್ಞೆಯನ್ನು ಸ್ವೀಕರಿಸೋಣ.

ಡಾ .ಸಿ ಎನ್ ಅಶ್ವಥ್ ನಾರಾಯಣ

The first-anniversary edition of the Cyber Vartika newsletter is here. The newsletter aims to bring to the fore the steps the Government of Karnataka is taking on various cybercrimes that are taking place in the state and the need for cybersecurity awareness. Since the onset of the COVID-19 pandemic, Cyber Crimes have grown unprecedentely. The need of the hour is to handle such cyber criminals with an iron fist, and it must be joint responsibility of industry, academia, and community-based organizations and improve technological and non-technological skills for taking on criminals in cyberspace.

Although the Internet has made lives easier for every one of us, it has also brought with it its share of negative baggage. Unethical hackers have utilised this to their benefit, and it is important to protect ourselves from such an onslaught.

The public must be educated on handling cybercrimes through innovative approaches using technology and education and protect themselves financially or otherwise from such perpetrators. With digital transactions becoming the order of the day, caution and awareness are of utmost importance to prevent data theft and loss of financial resources. A multi-pronged approach to handle cybercrime effectively is the need of the hour. If information is everything, then it must be protected, and it is the responsibility of every one of us to be aware of the danger lurking in the corners of the cyber world, be aware, and take steps to protect from such frauds and protect our kith and kin from such perpetrators of cybercrime.


The "Cyber Vartika" newsletter aims to bolster the knowledge of our citizens and draw attention to the various types of cybercrimes that are taking place. Let us pledge to end cybercrimes and protect our citizens from the fraudulent monsters.

Dr. C. N. Ashwath Narayan

# ಪ್ರಮುಖ ಸೈಬರ್ ಸುದ್ದಿ

## ಕಾಲ್ ರೆಕಾರ್ಡಿಂಗ್ ಆಪ್‌ಗಳನ್ನು ಗೂಗಲ್ ಬ್ಯಾನ್ ಮಾಡಿದೆ.

ಗೂಗಲ್ನ ಬದಲಾದ ನಿಯಮದ ಅನುಸಾರ, ಗ್ರಾಹಕರ ಸೆಕ್ಯುರಿಟಿ ಹಾಗೂ ಪ್ರೈವಸಿಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಗೂಗಲ್ ಸಂಸ್ಥೆಯು ಪ್ಲೇ ಸ್ಟೋರ್‌ನಲ್ಲಿದ್ದ ಥರ್ಡ್ ಪಾರ್ಟಿ ಕಾಲ್ ರೆಕಾರ್ಡಿಂಗ್ ಆಪ್‌ಗಳನ್ನು ಕೊನೆಗು ನಿಲ್ಲಿಸಿದೆ. ಪ್ಲೇ ಸ್ಟೋರ್‌ನಲ್ಲಿ ಇರುವ ಎಲ್ಲಾ ಥರ್ಡ್ ಪಾರ್ಟಿ ಕಾಲ್ ರೆಕಾರ್ಡಿಂಗ್ ಆಪ್‌ಗಳನ್ನು ತೆಗೆದುಹಾಕಿದ್ದರು ಕೂಡ, ಹೊಸ ನಿಯಮದಿಂದ ಮೊಬೈಲ್‌ನಲ್ಲಿ ಮೊದಲೇ ಇರುವಂತಹ ಬಿಲ್ಟ್-ಇನ್ ಕಾಲ್ ರೆಕಾರ್ಡಿಂಗ್ ಆಪ್‌ಗಳಿಗೆ ಯಾವುದೇ ತೊಂದರೆ ಇಲ್ಲ; ಹಾಗಾಗಿ, ಈ ನಿಯಮದಿಂದ ಗ್ರಾಹಕರಿಗೆ ಅಂತಹ ವ್ಯತ್ಯಾಸವೇನೂ ಆಗುವುದಿಲ್ಲ.




## ಭಾರತದ ಮಕ್ಕಳು ಸೈಬರ್ ಬೆದರಿಕೆಗೆ ಸುಲಭವಾಗಿ ತುತ್ತಾಗುತ್ತಾರೆ ಎಂದು ಸಂಶೋಧನೆಯಿಂದ ತಿಳಿದುಬಂದಿದೆ.

ಮೆಕೆಫೀ ಕಾರ್ಪೊರೇಶನ್‌ನ ಹೊಸ ವರದಿ ಪ್ರಕಾರ, ಭಾರತದ ಮಕ್ಕಳಿಗೆ ಆನ್‌ಲೈನ್ ರಿಸ್ಕ್ ಹೆಚ್ಚು ಎಂದು ತಿಳಿದುಬಂದಿದೆ. ಭಾರತದ ಮಕ್ಕಳು ತುಂಬಾ ಸಣ್ಣ ವಯಸ್ಸಿನಿಂದಲೇ ಮೊಬೈಲ್ ಬಳಕೆ ಶುರು ಮಾಡುತ್ತಿದ್ದಾರೆ. ಭಾರತದಲ್ಲಿ, ಸ್ಮಾರ್ಟ್‌ಫೋನ್ ಬಳಸುವ 10 ರಿಂದ 14 ವರ್ಷದ ಮಕ್ಕಳ ಪ್ರಮಾಣ ಶೇಕಡ 83%ರಷ್ಟಿದ್ದು, ಜಾಗತಿಕ ಸರಾಸರಿಗೆ ಹೋಲಿಸಿಕೊಂಡರೆ, ಇದು ಶೇಕಡ 7%ನಷ್ಟು ಹೆಚ್ಚು. ಪೋಷಕರು ಮತ್ತು ಮಕ್ಕಳ ನಡುವೆ ಮುಖ್ಯವಾದ ಭದ್ರತೆಯ ಅಂತರದ ಹೆಚ್ಚಳದಿಂದ, ಮಕ್ಕಳು ಇಂಟರ್‌ನೆಟ್ ಅಪಾಯಗಳಿಗೆ ಹೆಚ್ಚಾಗಿ ಈಡಾಗುತ್ತಿದ್ದಾರೆ. ಅಷ್ಟೇ ಅಲ್ಲದೇ, ಪೋಷಕರ ಹಸ್ತಕ್ಷೇಪ ಕಡಿಮೆ ಇರುವುದರಿಂದ, ಶೇಕಡ 22%ನಷ್ಟು ಯುವ ಜನತೆ ಯಾವುದೋ ಸಂದರ್ಭದಲ್ಲಿ ಸೈಬರ್ ಬೆದರಿಕೆಗೆ ಒಳಗಾಗಿದ್ದಾರೆ. ಜಾಗತಿಕ ಸರಾಸರಿಗೆ ಹೋಲಿಸಿಕೊಂಡರೆ, ಇದು ಶೇಕಡ 17%ರಷ್ಟು ಹೆಚ್ಚು.

## ಫರ್ಮ್, ಸರಕಾರಿ ಸಂಸ್ಥೆಗಳು ಸೈಬರ್ ಅಪರಾಧಗಳಾದ 6 ಘಂಟೆಗಳ ಒಳಗಾಗಿ ಅವನ್ನು ವರದಿ ಮಾಡಬೇಕೆಂದು, ಸಿಇಆರ್‌ಟಿ-ಇನ್ ನಿರ್ದೇಶನ ನೀಡಿದೆ.

ಸಂಬಂಧಪಟ್ಟ ಎಲ್ಲಾ ಸಂಸ್ಥೆಗಳು ಸೈಬರ್ ಅಪರಾಧಗಳು ನಡೆದ 6 ಘಂಟೆಗಳ ಒಳಗಾಗಿ ಅವನ್ನು ವರದಿ ಮಾಡಬೇಕೆಂದು ಸಿಇಆರ್‌ಟಿ-ಇನ್ ನಿರ್ದೇಶಿಸಿದೆ. ಸಿಇಆರ್‌ಟಿ-ಇನ್ ಪ್ರಕಾರ, ಈ ಮಾರ್ಗಸೂಚಿಗಳು ಭಾರತದ "ಸಂಪೂರ್ಣ ಸೈಬರ್ ಸೆಕ್ಯುರಿಟಿ ವಿನ್ಯಾಸ" ಹಾಗೂ "ಸುರಕ್ಷಿತ ಮತ್ತು ವಿಶ್ವಾಸಾರ್ಹ ಇಂಟರ್‌ನೆಟ್" ವ್ಯವಸ್ಥೆಯ ಸುಧಾರಣೆಗೆ ಕಾರಣವಾಗುತ್ತವೆ.

## ಜೋಕರ್ ಥ್ರೆಟ್‌ನಿಂದಾಗಿ ಗೂಗಲ್ ಸಂಸ್ಥೆ ಆಪ್‌ಗಳನ್ನು ಬ್ಯಾನ್ ಮಾಡಿದೆ


ಗೂಗಲ್ ಪ್ಲೇ ಸ್ಟೋರ್‌ನಿಂದ ಕ್ಯಾಮೆರಾ ಪಿಡಿಎಫ್ ಸ್ಕ್ಯಾನರ್, ಬ್ಲಡ್ ಪ್ರೆಶರ್ ಆಪ್ ಮತ್ತು ಸ್ಟೈಲ್ ಮೆಸೇಜ್ ಆಪ್ ಎಂಬ ಮೂರು ಆಪ್‌ಗಳನ್ನು ಗೂಗಲ್ ಸಂಸ್ಥೆ ಬ್ಯಾನ್ ಮಾಡಿದೆ. ಈ ಮೂರು ಆಪ್‌ಗಳು ಆಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳಲ್ಲಿ ಜೋಕರ್ ಥ್ರೆಟ್ ತರುತ್ತಿವೆ ಎಂಬ ಶಂಕೆ ವ್ಯಕ್ತವಾಗಿದೆ. ಆಂಡ್ರಾಯ್ಡ್ ಬಳಕೆದಾರರಿಂದ ಚಂದಾದಾರರಾಗಲು ಹಣದ ಪಾವತಿ ಮಾಡಿಸಿಕೊಂಡು, ಆ ಮೂಲಕ ಪಾವತಿಯಾದ ಹಣವನ್ನು ವಂಚಕರು ತಮ್ಮ ಖಾತೆಯಿಂದ ಪಡೆಯುವ ಅವಕಾಶವನ್ನು ಜೋಕರ್ ಮಾಲ್‌ವೇರ್ ಮಾಡಿಕೊಡುತ್ತದೆ.

## ಆಪಲ್ ಬಳಕೆದಾರರಿಗೆ ಸರಕಾರ "ಹೈ-ರಿಸ್ಕ್" ವಾರ್ನಿಂಗ್ ನೀಡಿದೆ

ಮ್ಯಾಕ್‌ಓಎಸ್, ಆಪಲ್ ಐಓಎಸ್, ಐಪ್ಯಾಡ್‌ಓಎಸ್, ಮತ್ತು ಆಪಲ್ ವಾಚ್‌ಓಎಸ್ ಬಳಕೆದಾರರ "ಹೈ ರಿಸ್ಕ್" ಮತ್ತು "ತೀವ್ರ" ತೆರನಾಗಿ ವಿವಿಧ ಸೆಕ್ಯುರಿಟಿ ತೊಂದರೆಗಳನ್ನು ಸಿಇಆರ್‌ಟಿ-ಇನ್ ವರ್ಗೀಕರಿಸಿದೆ. ಮ್ಯಾಕ್‌ಓಎಸ್ ಲ್ಯಾಪ್‌ಟಾಪ್ ಮತ್ತು ಡೆಸ್ಕ್‌ಟಾಪ್‌ಗಳಲ್ಲಿ ಸಫಾರಿ ಬ್ರೌಸರ್ನ 15.5 ಅಥವಾ ಅದಕ್ಕಿಂತಾ ಹಿಂದಿನ ವರ್ಶನ್ ಬಳಸುತ್ತಿರುವ ಗ್ರಾಹಕರಿಗೆ ಎಚ್ಚರಿಕೆ ನೀಡಲಾಗಿದೆ. ವೆಬ್ ಅಟ್ಯಾಕರ್ ಇದರ ಲಾಭ ಪಡೆದು, ಬಳಕೆದಾರರಿಗೆ ಯಾವುದೋ ಮಾಲ್‌ವೇರ್ ಇರುವ ಮಾಹಿತಿ ಕಳಿಸಿ, ಅದನ್ನು ನೋಡುವಂತೆ ಮಾಡಿ, ಮೋಸ ಮಾಡುಬಹುದುದಾಗಿದೆ.

## Google bans call recording apps

Google's policy change to improve its customers' security and privacy will finally stop third-party call recording apps on the Play Store. Even if all third-party call recording apps are removed from the Play Store, the new regulation will not affect built-in call recording apps; thus it may not make much difference to most of the users.




## Research says Indian children are more likely to be victims of cyberbullying

According to a new report by McAfee Corp Indian children have the highest online risk exposure. They are among the youngest to reach mobile maturity. In India, smartphone use among children aged 10 to 14 is at 83 percent, 7% higher than the global average of 76 percent. As a result of the significant security gap between parents and children, children are highly exposed to internet risks. Furthermore, while parental worry is minimal, 22 percent of Indian youngsters have encountered cyberbullying at some point, which is significantly higher than the global average of 17 percent.

## CERT-In directs firms, govt organizations to report cyber incidents within 6 hours

CERT-In has asked all entities to report cyber events within six hours of detection. These guidelines, according to CERT-In, would improve "total cybersecurity posture" and ensure a "secure and trusted Internet" in India.

## Google bans apps over Joker Threat

Google ban on three apps from the Google Play Store. The apps are Camera PDF Scanner, Blood Pressure App, and Style Message App. These apps are suspected of bringing in the Joker malware on Android smartphones. The Joker malware can deceive Android users into paying for subscriptions, after which the crooks take money from their accounts.

## Govt issues 'high-risk' warnings for Apple users

CERT-In has categorised many security issues for macOS, Apple iOS, iPadOS, and Apple watchOS users as "high" risk and "critical."
Warnings have been issued for anyone running Safari browser version 15.5 or earlier on macOS laptops and desktops. A remote attacker could take advantage of these vulnerabilities by convincing a victim to view maliciously produced web content.

### ಮೈಸೂರು: ಸೈಬರ್ ವಂಚನೆಯೊಂದರಲ್ಲಿ ವಿದ್ಯಾರ್ಥಿನಿ 1.95 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಳು.

ಆನ್‌ಲೈನ್ ಶಾಪಿಂಗ್ ಪೋರ್ಟಲ್‌ನಲ್ಲಿ ಸೆಲ್ಲಿಂಗ್ ಮರ್ಚೆಂಟ್ ಆಗಿ, ಕಮಿಷನ್ ಮೂಲಕ ಹೆಚ್ಚಿನ ಹಣ ಸಂಪಾದನೆ ಮಾಡಬಹುದು ಎಂಬ ಆಸೆ ಹುಟ್ಟಿಸಿ ಮರಳು ಮಾಡಿದ ವಂಚಕನೊಬ್ಬ ಮೈಸೂರಿನ ವಿದ್ಯಾರ್ಥಿನಿ ಇಂದ 1.95 ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಪಡೆದು ವಂಚಿಸಿದ್ದಾನೆ.

### ಹೋಮ್ ಲೋನ್ ಹೆಸರಿನಲ್ಲಿ ಮೋಸಹೋದ 60 ವರ್ಷದ ವೃದ್ಧ

ಭೂಪಾಲ್‌ನ ನಿಷತ್‌ಪುರ್‌ನಲ್ಲಿ, ಹೋಮ್ ಲೋನ್ ನೀಡುವ ಸೋಗಿನಲ್ಲಿ ಆನ್‌ಲೈನ್ ಮೋಸಗಾರನೊಬ್ಬ 60 ವರ್ಷದ ವೃದ್ಧರೊಬರನ್ನು ಏಮಾರಿಸಿ ವಂಚಿಸಿದ್ದಾನೆ. ಯಾವುದೋ ಗೊತ್ತಿಲ್ಲದ ನಂಬರ್‌ನಿಂದ ಬ್ಯಾಂಕ್ ಅಧಿಕಾರಿ ಎಂದು ಹೇಳಿಕೊಂಡು ಕರೆ ಮಾಡಿದ ವ್ಯಕ್ತಿ ಹೀಗೆ ವಂಚಿಸಿರುವುದು ಬಯಲಾಗಿದೆ.
ಹೋಮ್ ಲೋನ್ ಫೀಸ್ ಹೆಸರಿನಲ್ಲಿ ವಂಚಕ ವೃದ್ಧನಿಂದ ಹಣ ಸುಲಿಗೆ ಮಾಡುತ್ತಿದ್ದ ಎಂದು ತಿಳಿದುಬಂದಿದೆ. ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಿದಾಗ, ಅವರು ಹೋಮ್ ಲೋನ್‌ಗೆ ಸಂಬಂಧಿಸಿದ ಯಾವುದೇ ಪ್ರಕ್ರಿಯೆ ಅನುಸರಿಸಿಲ್ಲ ಎಂದು ತಿಳಿಸಿದ್ದಾರೆ.

### ಆನ್‌ಲೈನ್ ವಂಚನೆಯಲ್ಲಿ ಬಂಟ್ವಾಳದ ವೈದ್ಯರೊಬ್ಬರು 1.65 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ.

ಫೋನ್ ನಂಬರ್ ಅಪ್‌ಡೇಟ್ ಮಾಡುತ್ತಿರುವಂತೆ ಮರೆಮಾಚಿದ ವಂಚಕ, ವೈದ್ಯರಿಗೆ ಕರೆ ಮಾಡಿದ್ದಾನೆ. ಗೂಗಲ್ ಪ್ಲೇನಿಂದ ಕ್ವಿಕ್ ಈಜಿ ಆಪ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ಅವರಿಗೆ ತಿಳಿಸಿದ್ದಾನೆ. ತದನಂತರ ₹10 ಕ್ಕೆ ರೀಚಾರ್ಜ್ ಮಾಡಿಕೊಳ್ಳುವಂತೆ ಬೇಡಿಕೆ ಇರಿಸಿದ್ದು, ಆನಂತರ ಕ್ರಮವಾಗಿ ನಡೆದ ಮೂರು ವಹಿವಾಟುಗಳಲ್ಲಿ 1.65 ಲಕ್ಷ ರೂಪಾಯಿಗಳನ್ನು ವೈದ್ಯರು ಕಳೆದುಕೊಂಡಿದ್ದಾರೆ.





### ಮುಂಬೈನ ವ್ಯಕ್ತಿಯೊಬ್ಬರು ಆನ್‌ಲೈನ್ ಎಂಬಿಬಿಎಸ್ ಪ್ರವೇಶಾತಿಯ ವಂಚನೆಯಲ್ಲಿ ₹10.5 ಲಕ್ಷಗಳನ್ನು ಕಳೆದುಕೊಂಡಿದ್ದಾರೆ.

ಆಂಧ್ರಪ್ರದೇಶದ ರಾಜೀವ್ ಗಾಂಧಿ ಮೆಡಿಕಲ್ ಕಾಲೇಜಿನಲ್ಲಿ ತಮ್ಮ ಮಗಳಿಗೆ “ಎಂಬಿಬಿಎಸ್ ಸೀಟ್” ಕೊಡಿಸುವುದಾಗಿ ನಂಬಿಸಿದ ವಂಚಕನೊಬ್ಬನಿಗೆ, ರೂ. 10.5 ಲಕ್ಷಗಳನ್ನು ನೀಡಿದ ಮುಂಬೈ ಮೂಲದ 46 ವರ್ಷದ ವ್ಯಕ್ತಿ ವಂಚನೆಗೆ ತುತ್ತಾಗಿದ್ದಾರೆ. “ಏಎಂ-ಇಂಡಸ್‌ಬಿ” ಇಂದ ಬಂದ ಎಸ್‌ಎಂಎಸ್‌ಗೆ ಮರುಳಾದ ವ್ಯಕ್ತಿ ಬಲಿಪಶುವಾಗಿದ್ದಾರೆ. ಕಾಲೇಜ್ ನಕಲಿ ವೆಬ್‌ಸೈಟ್ ಸೃಷ್ಟಿಸಿದ ವಂಚಕ, ನಕಲಿ ಪ್ರವೇಶ ರಸೀದಿ ನೀಡಿ ಮೋಸ ಮಾಡಿದ್ದಾನೆ.

### ಸೈಬರ್ ವಂಚಕರಿಂದ ಶಿಕ್ಷಕಿ 1.22 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ

ಕೇರಳ ಮೂಲದ ಶಿಕ್ಷಕಿಯೊಬ್ಬರು, ಒನ್-ಟೈಮ್ ಪಾಸ್‌ವರ್ಡ್ (ಒಟಿಪಿ) ಒಳಗೊಂಡಂತೆ ಅವರ ಇತರ ಬ್ಯಾಂಕ್ ಸಂಬಂಧಿತ ವಿವರಗಳನ್ನು ಗ್ರಾಹಕ ಸೇವಾ ಪ್ರತಿನಿಧಿಗಳೆಂಬ ಸೋಗಿನಲ್ಲಿದ್ದ ಸೈಬರ್ ವಂಚಕರ ಬಳಿ ಹಂಚಿಕೊಂಡು, ಸುಮಾರು 1.22 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಆ ಶಿಕ್ಷಕಿಯನ್ನು ಪುಸಲಾಯಿಸಿದ ಸೈಬರ್ ವಂಚಕರು ಅವರಿಂದ ಮೂರು ಬಾರಿ ಒಟಿಪಿ ಪಡೆದುಕೊಂಡಿದ್ದಾರೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

**ದಯವಿಟ್ಟು ಗಮನಿಸಿ- ನಿಮ್ಮ ವೈಯಕ್ತಿಕ ಮಾಹಿತಿಯನ್ನು ಕದಿಯಲು ವಂಚಕರು ಹೊಸ-ಹೊಸ ತಂತ್ರಗಳನ್ನು ಹೆಣೆಯುತ್ತಿದ್ದಾರೆ. ಈ ಹೊಸ ವಿಧಾನದ ಮೂಲಕ, ಹೊಸದಾಗಿ ಬಿಡುಗಡೆಯಾದ ಚಿತ್ರಗಳ ಡೌನ್ಲೋಡ್ ಲಿಂಕ್ಗಳ ಸೋಗಿನಲ್ಲಿ, ಜನರಿಗೆ ಮಾಲ್ವೇರ್‌ಗಳನ್ನು ಕಳುಹಿಸುತ್ತಿದ್ದಾರೆ. ಈ ರೀತಿಯ ವಾಟ್ಸಪ್ ಫಾರ್ವರ್ಡ್ ಮೆಸೇಜ್ಗಳು ಬಂದಾಗ, ಜಾಗೃತರಾಗಿರುವುದು ಬಹಳ ಮುಖ್ಯ. ಇಂತಹ ಸಂದೇಶಗಳಲ್ಲಿ ವಂಚಕರು ಮಾಡಿರುವ ತಪ್ಪುಗಳು ಎದ್ದು ಕಾಣುವುದರಿಂದ, ಸೂಕ್ಷ್ಮ ವಾಗಿ ಗಮನಿಸಿದರೇ, ಅವುಗಳನ್ನು ಸುಲಭವಾಗಿ ಕಂಡುಹಿಡಿಯಬಹುದು.**

**Mysuru: Student duped of ₹ 1.95 lakh in a cyber fraud**

A fraudster duped a student from Mysuru of ₹ 1.95 lakh after convincing her to deposit money to become a selling merchant at an online shopping portal and earn substantial money through commission.

**60-year-old man deceived on the pretext of home loan**

In Nishatpura, Bhopal, a 60-year-old man, was allegedly tricked by an online fraudster under the guise of a home loan. The victim received a call from an unknown number posing as a bank official.

On the pretext of fees, the fraudster kept asking for money. When contacted, the bank officials denied that they had put up any such case for a loan.

**Doctor from Bantwal loses ₹1.65 lakh in an online fraud**

The fraudster called the doctor on the pretext of updating the phone number. The doctor was asked to download the Quick Easy app from Google Play. He was asked to recharge for ₹10, post which there were three consecutive transactions of ₹1.65 lakh.



- **Man from Mumbai loses ₹10.5 lakh to online MBBS admission fraud**

A 46-year-old Andheri resident was duped of Rs 10.5 lakh for an "MBBS seat" for his daughter at Rajiv Gandhi Medical College in Andhra Pradesh. The victim fell for this after receiving an SMS from "AM-INDUSB". The fraudster created a fake website of the college and issued fake admission receipts.

- **Cybercriminals dupe teacher of ₹1.22 Lakh**

A teacher from Kerala lost approximately ₹1.22 lakh after sharing her banking details, including the one-time password (OTP), with cybercriminals who posed as customer service representatives. The teacher was convinced to share her OTP with them not once, but thrice.




***Please remember- Scammers are coming up with newer ways to steal your personal information. In a new method, they are now sending malicious links offering free downloads of new films. Beware of such WhatsApp forwards and you can also easily spot these messages because of the visible mistakes made by the scamsters***

# ಕುಟುಂಬದ ಇಂಟರ್‌ನೆಟ್ ಸುರಕ್ಷತೆ ಸಲಹೆಗಳು

## ಪೋಷಕರಿಗೆ

ತಮ್ಮ ಕುಟುಂಬ ಸದಸ್ಯರೆಲ್ಲರ ಸೈಬರ್ ಸುರಕ್ಷತೆಗೆ ಪೋಷಕರ ಪಾತ್ರ ತುಂಬಾ ದೊಡ್ಡದಿದೆ. ಎಲ್ಲರ ಸುರಕ್ಷತೆಯನ್ನು ಕಾಪಾಡಬೇಕಾದರೇ, ಮೊದಲು ತಂದೆ-ತಾಯಿಗಳು ಸೈಬರ್ ಜಾಗೃತಿ ಬೆಳೆಸಿಕೊಳ್ಳಬೇಕು ಮತ್ತು ಉತ್ತಮ ಆನ್‌ಲೈನ್ ಅಭ್ಯಾಸಗಳ ಬೆಳವಣಿಗೆಗೆ ಉತ್ತೇಜನ ನೀಡಬೇಕು.

### ಪೇರೆಂಟಲ್ ಕಂಟ್ರೋಲ್ ಆ್ಯಕ್ಟಿವೇಟ್ ಮಾಡಿ

ಹೆಚ್ಚಿನ ಸಾಧನಗಳು ಚೈಲ್ಡ್ ಮೋಡ್ ಆಯ್ಕೆಯೊಂದಿಗೆ ದೊರೆಯುತ್ತವೆ. ಈ ಸೌಲಭ್ಯ ನಿಮ್ಮ ಸಾಧನಗಳಲ್ಲಿ ಲಭ್ಯವಿರುವಾಗ, ಮಕ್ಕಳ ಸುರಕ್ಷತೆಗೆ ಅದನ್ನು ಬಳಸಿಕೊಳ್ಳಿ. ಚೈಲ್ಡ್ ಮೋಡ್ ಆ್ಯಕ್ಟಿವೇಟ್ ಮಾಡಿದ್ದಾಗ, ಮಕ್ಕಳು ಅವರಿಗೆ ಮೀಸಲಾಗಿರುವ ಮಾಹಿತಿಯ ಹೊರತಾಗಿ ಬೇರೆ ಯಾವುದನ್ನು ನೋಡಲು ಸಾಧ್ಯವಾಗುವುದಿಲ್ಲ.



### ಕಾಲ-ಕಾಲಕ್ಕೆ ನಿಮ್ಮ ಸಾಧನಗಳನ್ನು ಅಪ್‌ಡೇಟ್ ಮಾಡುವುದಕ್ಕೆ ಆದ್ಯತೆ ನೀಡಿ.

ಅಪ್‌ಡೇಟ್ ಮಾಡುವುದು ಹೆಚ್ಚಿನ ಕೆಲಸದ ಹಾಗೆ ಕಂಡರೂ, ಇತ್ತೀಚಿನ ಅಪಾಯಗಳಿಂದ ಯಾವುದೇ ತೊಂದರೆಯಾಗದಂತೆ ಜಾಗೃತಿ ವಹಿಸಬೇಕಾದರೇ, ಕಂಪನಿ ಅಪಾಯಗಳಿಂದ ದೂರ ಇಡಲು ನೀಡುವ ಸೆಕ್ಯುರಿಟಿ ಪ್ಯಾಚ್‌ಗಳಿಗೋಸ್ಕರ ಅಪ್‌ಡೇಟ್ ಮಾಡಿಕೊಳ್ಳಬೇಕು. ಅಷ್ಟೇ ಅಲ್ಲ, ನಿಮ್ಮ ಸಾಧನ ಯಾವುದೇ ಹಳೆಯ ಆಪರೇಟಿಂಗ್ ಸಿಸ್ಟಮ್ ಅಥವಾ ಸಾಫ್ಟ್‌ವೇರ್ ಹೊಂದಿದ್ದರೇ, ನಿಮ್ಮ ಪೇರೆಂಟಲ್ ಕಂಟ್ರೋಲ್ ಯಾವುದೇ ಸಹಾಯಕ್ಕೆ ಬರುವುದಿಲ್ಲ. ಆಪರೇಟಿಂಗ್ ಸಿಸ್ಟಮ್ ಅಥವಾ ಸಾಫ್ಟ್‌ವೇರ್‌ನ ಹೊಸ ಆವೃತ್ತಿ ನಿಮ್ಮ ಕುಟುಂಬಕ್ಕೆ ಇಂಟರ್‌ನೆಟ್ ಸುರಕ್ಷತೆ ಒದಗಿಸುತ್ತದೆ.

### ಆಗಾಗ್ಗೆ ಡೇಟಾ ಬ್ಯಾಕ್‌ಅಪ್ ಮಾಡಿ.

ರ್‍ಯಾನ್ಸಮ್‌ವೇರ್ ಒಂದು ಕಂಪ್ಯೂಟರ್ ವೈರಸ್ ಆಗಿದ್ದು, ಸೈಬರ್ ದಾಳಿಕೋರನಿಗೆ ನಿಮ್ಮ ಕಂಪ್ಯೂಟರ್ ಅನ್ನು ಲಾಕ್ ಮಾಡಿ, ನೀವು ನಿಮ್ಮ ಕಂಪ್ಯೂಟರ್‌ನಲ್ಲಿ ಇರುವ ತುಂಬಾ ಮುಖ್ಯವಾದ ಫೈಲ್‌ಗಳನ್ನು ಆಕ್ಸೆಸ್ ಮಾಡದೇ ಇರುವ ಹಾಗೆ ಮಾಡಲು ಸಹಾಯ ಮಾಡುತ್ತದೆ. ಆಗಾಗ್ಗೆ ನಿಮ್ಮ ಡೇಟಾ ಬ್ಯಾಕ್‌ಅಪ್ ಮಾಡುವುದು ರ್‍ಯಾನ್ಸಮ್‌ವೇರ್ ಅಪಾಯದಿಂದ ಪಾರಾಗುವ ಒಂದು ಪರಿಣಾಮಕಾರಿ ವಿಧಾನವಾಗಿದೆ. ನಿಮ್ಮ ಮಕ್ಕಳ ಡಿವೈಸ್‌ಗಳನ್ನು ಬ್ಯಾಕ್ ಮಾಡುವ ಜೊತೆಗೆ, ಹಾಗೆ ಬ್ಯಾಕ್‌ಅಪ್ ಮಾಡುವುದರಿಂದ ಆಗುವ ಪ್ರಯೋಜನವನ್ನು ಅವರಿಗೆ ತಿಳಿಸಿ. ಅವರಿಗೆ ಬ್ಯಾಕ್‌ಅಪ್ ಮಾಡುವುದನ್ನು ಕಲಿಸಿ ಕೊಡಿ.

# Internet Safety Tips for Families

## For parents

Parents are the lifeguards responsible for their families to stay cyber safe. Every parent must be cyber aware and promote appropriate online behaviour to achieve that.

**Set up parental controls**

Most devices come with child mode options. It is always better to activate such an option available on your devices. By activating such options, your child will be blocked from accessing content that is not meant for children



**Prioritize updating your devices on time**

Updates may appear inconvenient, but security patches that address the most recent and inventive threats are why companies release new versions. Furthermore, an out-of-date operating system or software version can render your parental controls and privacy settings ineffective. Having the latest versions installed will help to keep your family safe online.


**Backup data regularly**


Ransomware is a virus that allows attackers to lock your computer and prevent you from accessing critical files on your device. Backing up your data regularly is one of the most effective ways to tackle ransomware threats. Back up your children's devices and educate your teenagers to do so.


ಸೈಸೆಕ್
ಸೈಬರ್ ಸೆಕ್ಯುರಿಟಿ ಕರ್ನಾಟಕ
ಕೆ-ಟೆಕ್ ಉನ್ನತಜ್ಞಾನ ಕೇಂದ್ರ
ನಿಮಗೆ ವಂಚನೆಯಾದಾಗ ಏನು ಮಾಡಬೇಕು?
ಅನಧಿಕೃತ ಫಿಶಿಂಗ್ ಲಿಂಕ್ ಮೇಲೆ ಕ್ಲಿಕ್ ಮಾಡಿದ್ದರಿಂದ, ಅನನ್ಯ 60,000 ರೂಪಾಯಿಗಳನ್ನು ಕಳೆದುಕೊಂಡರು.
ನಾನೆಂಥ ದಡ್ಡಿ ಇರ್ಬೇಕು? ನನ್ನ ಬುದ್ಧಿಗೆ ಏನಾಗಿತ್ತು. ನಾನಿದನ್ನ ಯಾರಿಗು ಹೇಳೋದಿಲ್ಲ.
ಯಾವತ್ತಿಗು ನಾಚಿಕೆ ಅಥವಾ ಅವಮಾನ ಅನ್ಕೊಬೇಡಿ; ನೀವು ವಂಚನೆಗೆ ಒಳಗಾಗಿದ್ದೀರ. ಆದ್ದರಿಂದ, ಈ ಅಪರಾಧದ ಬಗ್ಗೆ ವರದಿ ಮಾಡಿ, ನಿಮಗೆ ಬೇಕಾದ ನೆರವು ಪಡ್ಕೊಬೇಕು.
• ನೀವು ಕರ್ನಾಟಕದಲ್ಲಿ ವಾಸವಿದ್ದು, ಹಣಕಾಸಿನ ವಂಚನೆಗೆ ತುತ್ತಾಗಿದ್ದರೆ, ತಕ್ಷಣ 112 ಕ್ಕೆ ಕರೆ ಮಾಡಿ. ನೀವು ಎಷ್ಟು ಬೇಗ ಸಂಪರ್ಕ ಮಾಡುತ್ತೀರೊ, ಅಷ್ಟು ಬೇಗ ಪೊಲೀಸರು ಕ್ರಮವಹಿಸಿ, ನಿಮ್ಮ ಹಣದ ವಾಪಸ್ಸಾತಿಗೆ ಸಹಾಯ ಮಾಡಬಹುದು.
• ಬೇರೆ ರೀತಿಯ ಸೈಬರ್ ಅಪರಾಧಗಳು ಆದಾಗ, ನೀವು ಹತ್ತಿರದ ಪೊಲೀಸ್ ಸ್ಟೇಶನ್‌ಗೆ ವರದಿ ಮಾಡಬಹುದು ಅಥವಾ ನಿಮ್ಮ ಕಂಪ್ಲೆಂಟ್ ಅನ್ನು cybercrime.gov.in ಆನ್ ಲೈನ್ ವೆಬ್‌ಸೈಟ್‌ನಲ್ಲಿ ನೋಂದಾಯಿಸಬಹುದು.
• ಮೊಬೈಲ್ ಆ್ಯಪ್, ಆನ್‌ಲೈನ್ ಬ್ಯಾಂಕಿಂಗ್ ಅಥವಾ ಟಾಲ್-ಫ್ರೀ ಸಂಖ್ಯೆಯ ಮುಖಾಂತರ ನಿಮ್ಮ ಬ್ಯಾಂಕ್ ಅನ್ನು ಸಂಪರ್ಕಿಸಿ, ಕಾರ್ಡ್ ಬ್ಲಾಕ್ ಮಾಡಿ.
• #cybersecure ಮತ್ತು #cyberaware ಆಗಿರಿ.
@CySecKCoE


ಸೈಸೆಕ್
ಸೈಬರ್ ಸೆಕ್ಯುರಿಟಿ ಕರ್ನಾಟಕ
ಕೆ-ಟೆಕ್ ಉನ್ನತಜ್ಞಾನ ಕೇಂದ್ರ
ನಕಲಿ ದಾಖಲಾತಿಗಳನ್ನು ಕಂಡುಹಿಡಿಯುವುದು ಹೇಗೆ?
ಕಿಶೋರ್ ಎಕ್ಸಾಂಗೆ ತಯಾರಾಗುತ್ತಿದ್ದ. ಅವನ ಕ್ಲಾಸ್ ಗ್ರೂಪ್‌ಗೆ, "ಎಕ್ಸಾಂ ಪೋಸ್ಟ್‌ಪೋನ್ ಆಗಿದೆ" ಎಂಬ PDF ಡಾಕ್ಯುಮೆಂಟ್ ಬಂತು.
ನಾನೀಗ ಒಂದು ಫೇಕ್ ನೋಟೀಸ್ ಕಳಿಸಿ, ಗೊಂದಲ ಸೃಷ್ಟಿ ಮಾಡ್ತೀನಿ. ಯಾರಿಗು ಓದೋದಕ್ಕೆ ಬಿಡೋದಿಲ್ಲ.
ಎಕ್ಸಾಂ ಮುಂದೋಯ್ತು!! ನಾನೀಗ ಫಿಲಂ ನೋಡ್ತಾ ರಿಲ್ಯಾಕ್ಸ್ ಆಗ್ತೀನಿ.
EXAMS POSTPONED!!
ಸ್ವಲ್ಪ ತಡಿ ಕಿಶೋರ್! ಈ ನೋಟೀಸ್ ನಿನ್ನ ಕಾಲೇಜ್‌ನಿಂದಲೆ ಬಂದಿದೆ ಅಂತ ನಿನಗೆ ಖಾತ್ರಿ ಇದ್ಯಾ? PDF ಡಾಕ್ಯುಮೆಂಟ್‌ನಲ್ಲಿ ತುಂಬಾ ಫಾಂಟ್‌ಗಳನ್ನ ಬಳಸಿದ್ದಾರೆ. ನಿನ್ನ ಪ್ರೊಫೆಸರ್‌ಗೆ ಕಾಲ್ ಮಾಡಿ ಎಕ್ಸಾಂ ಪೋಸ್ಟ್‌ಪೋನ್ ಆಗಿರೋದು ನಿಜಾನ ಅಂತ ವಿಚಾರಿಸು.
dear StuDent,
please NOTE
EXAMS POSTPONED!!
• ವಂಚಕರು ಫೋಟೋಶಾಪ್ ರೀತಿಯ ಟೂಲ್ ಗಳನ್ನು ಬಳಸಿ ಡಿಜಿಟಲ್ ಡಾಕ್ಯುಮೆಂಟ್‌ಗಳ ಮಾಹಿತಿಯನ್ನು ಕಾಪಿ ಮಾಡಿ ಬದಲಾವಣೆ ಮಾಡ್ತಾರೆ. ಡಾಕ್ಯುಮೆಂಟ್‌ಗಳನ್ನು ನಕಲಿಸುವ ಹಲವಾರು ಎಲೆಕ್ಟ್ರಾನಿಕ್ ವಿಧಾನಗಳನ್ನು ಬಳಸಿ, ಫೋರ್ಜರಿ ಮಾಡಲು ಅವಕಾಶಗಳಿವೆ.
• ಈ ರೀತಿ ಫೋರ್ಜರಿ ಅಥವಾ ನಕಲಾದ ಡಾಕ್ಯುಮೆಂಟ್‌ಗಳಲ್ಲಿ, ಸಾಮಾನ್ಯವಾಗಿ ಕಾಗುಣಿತದ ತಪ್ಪುಗಳು, ವ್ಯಾಕರಣದ ತಪ್ಪುಗಳು ಮತ್ತು ವಿನ್ಯಾಸದಲ್ಲಿನ ದೋಷಗಳು ಕೂಡ ಕಂಡುಬರುತ್ತವೆ.
• ಅನುಮಾನ ತರಿಸುವ ರೀತಿಯ ಫಾರ್ಮ್ಯಾಟಿಂಗ್ ಅಥವಾ ಡಾಕ್ಯುಮೆಂಟ್‌ನಲ್ಲಿನ ಪದಗಳ ನಡುವಿನ ಫಾರ್ಮ್ಯಾಟಿಂಗ್ ವ್ಯತ್ಯಾಸ, ಒಂದು ಪದಕ್ಕಿಂತ ಮತ್ತೊಂದು ಮಬ್ಬಾಗಿ ಕಾಣಿಸುವುದು, ನಕಲಿ ಡಾಕ್ಯುಮೆಂಟ್‌ನ ಕಂಡುಹಿಡಿಯುವ ಕುರುಹುಗಳಾಗಿವೆ. ನೀವು ಅಸಲೀ ಡಾಕ್ಯುಮೆಂಟ್ ಅನ್ನು ಸ್ಕ್ಯಾನ್ ಮಾಡಿ, ಅದನ್ನು ಕಂಪ್ಯೂಟರ್‌ನಲ್ಲಿ ಎಡಿಟ್ ಮಾಡಲು ಮುಂದಾದಾಗ, ಬದಲಾದ ಡಾಕ್ಯುಮೆಂಟ್ ಮಾಹಿತಿ ಅಸಲೀ ಡಾಕ್ಯುಮೆಂಟ್‌ನ ಮಾಹಿತಿಗಿಂತಲು ಭಿನ್ನವಾಗಿ ಕಾಣಿಸುತ್ತದೆ.
• ಯಾವಾಗಲು ಅಧಿಕೃತ ವೆಬ್‌ಸೈಟ್‌ಗಳನ್ನು ಬಳಸಿ ಮಾಹಿತಿಯ ವಿಶ್ವಾಸಾರ್ಹತೆಯ ಬಗ್ಗೆ ಪರಿಶೀಲಿಸಿ.
@CySecKCoE


CySecK
Cyber Security Karnataka
K-Tech CoE for Cyber Security
What to do if you are duped?
Ananya gets duped of ₹60,000 after clicking an unsolicited phishing link.
How can I be such a fool? I feel terrible, and I am not going to tell anyone.
Never feel embarrassed or humiliated; you have been the victim of a crime, and you must report it and receive the assistance you require.
• If you are a resident of Karnataka and fallen victim to a financial scam, immediately call 112. The earlier you call, the higher the chances of police able to get back your money.
• For other types of cyber crime, you can also report it at the nearest police station or register a complaint online at - cybercrime.gov.in.
• Inform your bank and block your card through a mobile app, online banking, or toll-free number.
• Stay #cybersecure and #cyberaware
@CySecKCoE


CySecK
Cyber Security Karnataka
K-Tech CoE for Cyber Security
How to identify forged documents?
Kishore is preparing for his exams, and he receives a PDF on the class group saying, "The exams are postponed".
Let me send a fake notice, create chaos and not let anybody study.
Exams postponed!! I will watch a film and relax.
EXAMS POSTPONED!!
PDF
Hey, are you sure that this notice is from your college? There are multiple fonts used in this PDF. Please confirm it from your professor.
dear StuDent,
please NOTE
EXAMS POSTPONED!!
-Fraudsters will copy and alter the text in digital documents using tools like Photoshop. The possibilities for document forgeries are infinite with electronic manipulation.
-Always look for obvious errors, ranging from simple spelling mistakes or grammatical errors to typeface discrepancies.
-Strange formatting or text that appears blurrier than the rest of the document are examples of unusual formatting. If you scan a document into a computer and then edit it, the altered text will almost always seem different than the original text.
-Always verify the authenticity of information from official websites.
@CySecKCoE


CySecK
Cyber Security Karnataka
K-Tech CoE for Cyber Security
Cyber Vartika
Quiz Contest
https://cs-coe.iisc.ac.in/awareness-hub/quiz/
The quiz is open till Wednesday 15th June 2022
The Top 3 winners will get Bluetooth speakers, and the next 9 winners will get power banks as prizes.

## Useful links

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- **ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು cybercrime.gov.in**
- **ತಪ್ಪು ಮಾಹಿತಿ ಗುರುತಿಸಲು -https://factcheck.ksp.gov.in**
- **ಆನ್‌ಲೈನ್ ವಂಚನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಬೆಂಗಳೂರು ಜನರು 112ಗೆ ಕರೆ ಮಾಡಬಹುದು**

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Bangalorians can call 112 for registering complaints related to online frauds.**

## Feedback

**ಧನ್ಯವಾದಗಳು ಸರ್. ಸೈಬರ್ ವರ್ತಿಕಾ ಎಲ್ಲ ಆವೃತ್ತಿಗಳು ಚೆನ್ನಾಗಿ ಮೂಡಿ ಬರುತ್ತಿವೆ. ಅದರ ಯಶಸ್ಸಿನ ಹಿಂದಿರುವ ಎಲ್ಲರಿಗೂ ಅಭಿನಂದನೆಗಳು. ಅದು ಇನ್ನೂ ಹಲವರಿಗೆ ತಲುಪಬೇಕು. ಸೈಬರ್ ಅಪರಾಧಗಳಿಂದ ಜನರು, ವಿದ್ಯಾವಂತರನ್ನೂ ಸೇರಿಸಿ, ಮೋಸ ಹೋಗುವ ಸುದ್ದಿ ಪ್ರತಿ ದಿನ ನಾವು ಓದುತ್ತಲೇ ಇರುತ್ತೇವೆ. ಇದಕ್ಕಾಗಿ ನೀವು ಈ ಕೆಳಗಿನ ಕೆಲ ಸಲಹೆಗಳನ್ನು ಪರಿಗಣಿಸುತ್ತೀರೆಂದು ನನ್ನ ನಂಬಿಕೆ:**

**೧. ಈ ಎಲ್ಲ ಮತ್ತು ಮುಂದೆ ಬರುವ ಆವೃತ್ತಿಗಳನ್ನು ಒಂದು *website* ನಲ್ಲಿ ಪ್ರಕಟಿಸಿ**
**೨. ಉಳಿದ ಸರಕಾರಿ *website* ಗಳಲ್ಲಿ ಈ *site* ಗೆ *back link* ಕೊಡಿ**
**೩. ಓದುಗರಿಂದಲೂ ಲೇಖನ, ಚಿತ್ರ, ವ್ಯಂಗ್ಯ ಚಿತ್ರಗಳನ್ನು ಆಹ್ವಾನಿಸಿ. ಉತ್ತಮ ಲೇಖನಗಳಿಗೆ ಬಹುಮಾನ ಕೊಡಿ.**
**೪. ಸೈಬರ್ ಅಪರಾಧ ಕಾನೂನು ಮತ್ತು ಅದರಲ್ಲಿರುವ ಶಿಕ್ಷೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಿ**

**ಉತ್ತಮ ಕೆಲಸವನ್ನು ಮಾಡುತ್ತಿದ್ದೀರಿ, ಮುಂದುವರಿಸಿ. ಧನ್ಯವಾದಗಳು.**

***Regards,***
***Girish Aithal***

**Congratulations to cyseck wing. I am regular follower of your magazine, it is very useful. continue publishing. Wish you all the best.**
**Shiva Kumar T**

# About CysecK

Centre of Excellence for Cyber Security

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government's K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.